KADG310007132021

Presented on : 07-12-2021
Registered on : 09-12-2021
Decided on : 06-02-2024
Duration : 2 years,
1 months, 30 days

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹರಿಹರ.

ಉಪಸ್ಥಿತರುಃ- ಶ್ರೀಮತಿ ಶಾರದಾದೇವಿ ಸಿ.ಹಟ್ಟಿ ಬಿ.ಕಾಂ., ಎಲ್.ಎಲ್.ಬಿ., (ಸ್ಪೆಷಲ್),
ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,
ಹರಿಹರ.

ದಿನಾಂಕ 06 ನೇ ಫೆಬ್ರುವರಿ 2024

ಆರ್.ಎ. ಸಂಖ್ಯೆ 66/2021

ಮೇಲ್ಮನವಿದಾರರು ಃ-

1. ಚನ್ನಪ್ಪ
ಬಿನ್ ಲೇಟ್ ಬಸಪ್ಪ,
ವಯಸ್ಸು 67 ವರ್ಷ,
ವ್ಯವಸಾಯ ವೃತ್ತಿ,
ವಾಸ ಕೊಂಡಜ್ಜಿ ಗ್ರಾಮ,
ಹರಿಹರ ತಾಲ್ಲೂಕು,
ದಾವಣಗೆರೆ ಜಿಲ್ಲೆ.

2. ನಾರದಮುನಿ
ಬಿನ್ ಚನ್ನಪ್ಪ,
ವಯಸ್ಸು 34 ವರ್ಷ,
ವ್ಯವಸಾಯ ವೃತ್ತಿ,

ವಾಸ ಕೊಂಡಜ್ಜಿ ಗ್ರಾಮ,
ಹರಿಹರ ತಾಲ್ಲೂಕು,
ದಾವಣಗೆರೆ ಜಿಲ್ಲೆ.

(ಮೇಲ್ಮನವಿದಾರರ ಪರ ವಕೀಲರು – ಶ್ರೀ ಬಿ.ಹೆಚ್.)
–:: ವಿರುದ್ಧ ::–

ಎದುರುದಾರರು ಃ–

1. ಶ್ರೀಮತಿ ಮಂಜುಳ
ಕೋಂ ಅಣ್ಣಪ್ಪ ಹೊಸಳ್ಳೆರ,
ಬಿನ್ ಲೇಟ್ ಬಸಪ್ಪ,
ವಯಸ್ಸು 41 ವರ್ಷ,
ವಾಸ ಮಡಿಕೆನಿಚಾಪುರ ಗ್ರಾಮ,
ಉಚ್ಚಂಗಿದುರ್ಗ ಅಂಚೆ,
ಹರಪನಹಳ್ಳಿ ತಾಲ್ಲೂಕು,
ವಿಜಯನಗರ ಜಿಲ್ಲೆ.

2. ಶ್ರೀಮತಿ ಪ್ರಮೀಳಮ್ಮ
ಕೋಂ ಮಹೇಶ್ವರಪ್ಪ,
ಬಿನ್ ಲೇಟ್ ಬಸಪ್ಪ,
ವಯಸ್ಸು 71 ವರ್ಷ,
ವಾಸ ಕೊಂಡಜ್ಜಿ ಗ್ರಾಮ,
ಹರಿಹರ ತಾಲ್ಲೂಕು,
ದಾವಣಗೆರೆ ಜಿಲ್ಲೆ.

3. ಶ್ರೀಮತಿ ರುದ್ರಮ್ಮ
ಕೋಂ ರಾಮಚಂದ್ರಪ್ಪ,
ವಯಸ್ಸು 61 ವರ್ಷ,
ಗೃಹಿಣಿ,
ವಾಸ ಶಾಮನೂರು ಗ್ರಾಮ,
ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ.

4. ಶ್ರೀಮತಿ ಮಂಜಮ್ಮ
ಕೋಂ ಪರಸಪ್ಪ,
ಬಿನ್ ಹಾಲಪ್ಪ,
ವಯಸ್ಸು 41 ವರ್ಷ,
ವ್ಯವಸಾಯ ವೃತ್ತಿ,
ವಾಸ ಹಳೇಕುಂದುವಾಡ ಗ್ರಾಮ ಮತ್ತು ಅಂಚೆ,
ದಾವಣಗೆರೆ ತಾಲ್ಲೂಕು,
ದಾವಣಗೆರೆ ಜಿಲ್ಲೆ.

(ಎದುರುದಾರರ ಪರ ವಕೀಲರು – ಶ್ರೀ ಎಸ್.ವೈ.ಎ.)

ಮೇಲ್ಮನವಿ ದಾಖಲು ಮಾಡಿದ ದಿನಾಂಕ – 09-12-2021

ಮೇಲ್ಮನವಿ ಸ್ವರೂಪ – ವಿಚಾರಣಾ ನ್ಯಾಯಾಲಯದ ಅಸಲು ದಾವಾ ಸಂ.244/2015 ರ ತೀರ್ಪು ಮತ್ತು ಡಿಕ್ರಿಯನ್ನು ರದ್ದುಪಡಿಸಲು ಕೋರಿ ಸಲ್ಲಿಸಿದ ಮೇಲ್ಮನವಿ.

ತೀರ್ಪು ಘೋಷಣೆ ಮಾಡಿದ ದಿನಾಂಕ – 06-02-2024

| | | ವರ್ಷಗಳು | ತಿಂಗಳು | ದಿನಗಳು |
|---|---|---|---|---|
| ಒಟ್ಟು ಕಾಲಾವಧಿ | – | 02 | 01 | 30 |

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.

## ತೀರ್ಪು

ಮೇಲ್ಮನವಿದಾರರು/1 ಮತ್ತು 2 ನೇ ಪ್ರತಿವಾದಿಯರು ಈ ಮೇಲ್ಮನವಿಯನ್ನು ಸಿ.ಪ್ರ.ಸಂಹಿತೆ ಕ್ರಮಾದೇಶ 41 ನಿಯಮ 1 ಮತ್ತು 2 ರ ಅಡಿಯಲ್ಲಿ ಸಲ್ಲಿಸಿ, ಹರಿಹರದ 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿನ ಮೂಲ ದಾವೆ

ನಂ.244/2015 ರಲ್ಲಿ ದಿನಾಂಕ 26/10/2021 ರಂದು ನೀಡಿರುವಂತಹ ತೀರ್ಪು ಮತ್ತು ಡಿಕ್ರಿಯನ್ನು ರದ್ದುಪಡಿಸಬೇಕೆಂದು ಕೋರಿರುತ್ತಾರೆ.

2. ಪಕ್ಷಗಾರರು ವಿಚಾರಣಾ ನ್ಯಾಯಾಲಯದಲ್ಲಿ ಯಾವ ಶ್ರೇಯಾಂಕದಲ್ಲಿದ್ದರೋ, ಸ್ಪಷ್ಟತೆ ಮತ್ತು ಅನುಕೂಲಕ್ಕಾಗಿ ಅದೇ ರೀತಿ ಅವರನ್ನು ಉಲ್ಲೇಖಿಸಲಾಗುತ್ತದೆ.

3. ಈ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆಃ–

ವಾದಿಯರು ಪ್ರತಿವಾದಿಯರ ವಿರುದ್ಧ ಘೋಷಣೆ ಮತ್ತು ಶಾಶ್ವತ ನಿರ್ಬಂಧಕಾಜ್ಞೆ, ಮತ್ತು ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನತೆಯನ್ನು ಕೋರಿ ದಾವಾ ಸಲ್ಲಿಸಿದ್ದಾರೆ. ವಾದಿಯರು ಮತ್ತು 1 ರಿಂದ 3 ನೇ ಪ್ರತಿವಾದಿಯರು ಸಂಬಂಧಿಕರಾಗಿದ್ದು, 4 ನೇ ಪ್ರತಿವಾದಿ ದಾವಾ ಐಟಂ ನಂ.1 ನ್ನು 1 ನೇ ಪ್ರತಿವಾದಿಯಿಂದ ಖರೀದಿಸಿದ್ದರಿಂದ ದಾವೆಯಲ್ಲಿ ಅವಶ್ಯಕ ಪಕ್ಷಗಾರರನ್ನಾಗಿ ಸೇರ್ಪಡೆ ಮಾಡಿದ್ದಾರೆ. ವಾದಿಯರು ವಾದಪತ್ರದ ಖಂಡಿಕೆ 5 ರಲ್ಲಿ ವಂಶವೃಕ್ಷವನ್ನು ನಮೂದಿಸಿದ್ದು, ಕುಟುಂಬದ ಮೂಲ ಪುರುಷ ಬಸಪ್ಪ ಮತ್ತು ಆತನ ಹೆಂಡತಿ ಗೌರಮ್ಮ ಎನ್ನುವವರು ಮೃತರಾಗಿದ್ದು, ಅವರಿಗೆ ವಾದಿಯರು 1 ಮತ್ತು 3 ನೇ ಪ್ರತಿವಾದಿಯರು ಮಕ್ಕಳಿರುತ್ತಾರೆ. ಪ್ರಕಾಶ್ ಮತ್ತು ಪುಷ್ಪಾ ಎನ್ನುವವರು ಅವಿವಾಹಿತರಾಗಿ ಮೃತರಾಗಿದ್ದಾರೆ. 2 ನೇ ಪ್ರತಿವಾದಿಯು 1 ನೇ ಪ್ರತಿವಾದಿಯ ಮಗನಿರುತ್ತಾನೆ. ವಾದಿಯರು, 1 ಮತ್ತು 3 ನೇ ಪ್ರತಿವಾದಿಯರ ತಂದೆ ಬಸಪ್ಪ ಎನ್ನುವವರು ದಿಃ15/11/1991 ರಂದು ಮೃತಪಟ್ಟಿರುತ್ತಾರೆ. ತಾಯಿ ಗೌರಮ್ಮನವರು ದಿಃ12/05/2005 ರಂದು ಮೃತರಾಗಿದ್ದಾರೆ. ವಾದಿಯರು, 1 ಮತ್ತು 3 ನೇ ಪ್ರತಿವಾದಿಯರು ಹಿಂದೂ ಅವಿಭಕ್ತ ಕುಟುಂಬದ ಸದಸ್ಯರಾಗಿದ್ದು, ವಾದಿಯರ ತಂದೆಯ ಜೀವಿತಾವಧಿಯಲ್ಲಿ 1, 3 ನೇ ಪ್ರತಿವಾದಿ ಮತ್ತು ಮೃತ ಪ್ರಕಾಶ್ ಎನ್ನುವವರು ದಿಃ13/04/1992 ರಂದು ನೊಂದಾಯಿತ ವಿಭಾಗಪತ್ರ ಮಾಡಿಕೊಂಡಿದ್ದಾರೆ. ವಾದಿಯರು

3 ನೇ ಪ್ರತಿವಾದಿ ಮತ್ತು ಪುಷ್ಪಾ ಎನ್ನುವವರು ಅವಿವಾಹಿತರಾಗಿದ್ದು, ಸದರಿಯವರು ವಿಭಾಗಪತ್ರಕ್ಕೆ ಪಕ್ಷಗಾರರಾಗಿರುವುದಿಲ್ಲ. ವಾದಿಯರಿಗೆ ಮತ್ತು 3 ನೇ ಪ್ರತಿವಾದಿಗೆ ಗೊತ್ತಾಗದಂತೆ ವಾದಿಯರ ತಂದೆ ಬಸಪ್ಪ, 1 ಮತ್ತು 3 ನೇ ಪ್ರತಿವಾದಿಯರು ಮತ್ತು ಪ್ರಕಾಶ್ ಎನ್ನುವವರು ಒಟ್ಟು ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದಾರೆ. ವಾದಿಯ ತಂದೆ ಬಸಪ್ಪ ಒಟ್ಟು ಕುಟುಂಬದ ಕರ್ತನಾಗಿ ದಾವಾ ಆಸ್ತಿಗಳ ಮೇಲ್ವಿಚಾರಣೆ ನೋಡಿಕೊಳ್ಳುತ್ತ ಇದ್ದು, ದಾವಾ ಆಸ್ತಿಗಳು ವಾದಿಯರ ಮತ್ತು ಪ್ರತಿವಾದಿಯರ ಜಂಟಿ ಸ್ವಾಧೀನಾನುಭವದಲ್ಲಿರುತ್ತವೆ. 1 ನೇ ಪ್ರತಿವಾದಿಯು ವಾದಿಯರ ಹಿರಿಯ ಸಹೋದರನಾಗಿದ್ದು, ವಾದಿಯರಿಗೆ ಮೋಸ ಮಾಡುವ ಉದ್ದೇಶದಿಂದ ವಿಭಾಗಪತ್ರವನ್ನು ಸೃಷ್ಟಿ ಮಾಡಿಕೊಂಡು ದಾವಾ ಐಟಂ ನಂ.1 ನ್ನು ರೂ.3,50,000/-ಗಳಿಗೆ 4 ನೇ ಪ್ರತಿವಾದಿಗೆ ದಿಃ19/12/2014 ರಂದು ನೊಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಿದ್ದಾರೆ. ಸದರಿ ಕ್ರಯಪತ್ರವು ವಾದಿಯರಿಗೆ ಬಂಧನಕಾರಿಯಾಗಿರುವುದಿಲ್ಲ. ದಿಃ13/04/1992 ರ ವಿಭಾಗಪತ್ರವು ವಾದಿಯರಿಗೆ ಬಂಧನಕಾರಿಯಾಗಿರುವುದಿಲ್ಲ. ಪ್ರಕಾಶ್ ಬಿನ್ ಬಸಪ್ಪ ಎನ್ನುವವರು ತಮ್ಮ ಜೀವಿತಾವಧಿಯಲ್ಲಿ ದಿಃ07/10/2005 ರಂದು ವಾದಿಯರ ಪರವಾಗಿ ನೊಂದಾಯಿತ ಮರಣಶಾಸನವನ್ನು ಬರೆದುಕೊಟ್ಟಿದ್ದಾರೆ. 1 ನೇ ಪ್ರತಿವಾದಿಯು ವಾದಿಯರಿಗೆ ಮೋಸ ಮಾಡುವ ಉದ್ದೇಶದಿಂದ ಸರ್ವೆ ನಂ.259/1 ರಲ್ಲಿ 1 ಎಕರೆ 4 ಗುಂಟೆ ಜಮೀನನ್ನು ಬಲವಂತವಾಗಿ ಸಾಗುವಳಿ ಮಾಡುತ್ತಿದ್ದಾರೆ. ವಾದಿಯರು ಆ ಕುರಿತು 1 ನೇ ಪ್ರತಿವಾದಿಯ ವಿರುದ್ಧ ಮೂಲ ದಾವಾ ನಂ.25/2006 ನ್ನು ಸಲ್ಲಿಸಿದ್ದು, ಸದರಿ ದಾವೆಯಲ್ಲಿ ವಾದಿಯರು ಸ್ವಾಧೀನಾನುಭವದಲ್ಲಿರುವುದಿಲ್ಲ ಎಂದು ದಾವಾ ವಜಾ ಆಗಿರುತ್ತದೆ. ಸದರಿ ತೀರ್ಪು ಮತ್ತು ಡಿಕ್ರಿಯನ್ನು ಪ್ರಶ್ನಿಸಿ ವಾದಿಯರು ಆರ್.ಎ.ನಂ.70/2007 ನ್ನು ದಾಖಲಿಸಿದ್ದು, ಸದರಿ ಮೇಲ್ಮನವಿಯು ಸಹ ವಜಾ ಆಗಿರುತ್ತದೆ. 1 ನೇ ಪ್ರತಿವಾದಿಯು ಆರ್ಥಿಕವಾಗಿ ಮತ್ತು ದೈಹಿಕವಾಗಿ ಪ್ರಭಾವಿ ವ್ಯಕ್ತಿಯಾಗಿರುವುದರಿಂದ ವಾದಿಯರಿಗೆ ದಾವಾ ಆಸ್ತಿಯಲ್ಲಿ ಭಾಗಾಂಶ ಕೊಟ್ಟಿರುವುದಿಲ್ಲ. ಆದ್ದರಿಂದ ದಾವೆಯಲ್ಲಿ ಕೇಳಿದಂತೆ ಭಾಗಾಂಶ ಮತ್ತು ಪ್ರತ್ಯೇಕ ಸ್ವಾಧೀನ ಕೊಡಿಸಬೇಕೆಂದು

ಕೋರಿದ್ದಾರೆ. ವಾದಿಯರ ಸಹೋದರ ಪ್ರಕಾಶ್ ಎನ್ನುವವರು ದಿಃ20/10/2005 ರಂದು ದಾವಾ 'E' ಶೆಡ್ಯೂಲ್ ಸ್ವತ್ತಿನ ಕುರಿತು ನೊಂದಾಯಿತ ಮರಣಶಾಸನವನ್ನು ಬರೆದುಕೊಟ್ಟಿದ್ದಾರೆ ಅದೇ ರೀತಿ 2 ನೇ ವಾದಿಯ ಪರವಾಗಿ ದಿಃ07/10/2005 ರಂದು ದಾವಾ ಐಟಂ ನಂ.'F' ಆಸ್ತಿಗೆ ಸಂಬಂಧಪಟ್ಟಂತೆ ನೊಂದಾಯಿತ ಮರಣಶಾಸನವನ್ನು ಬರೆದುಕೊಟ್ಟಿದ್ದಾರೆ. 1 ನೇ ಪ್ರತಿವಾದಿಯು ವಾದಿಯರಿಗೆ ಸದರಿ ಆಸ್ತಿಗಳ ಸ್ವಾಧೀನಾನುಭವದಲ್ಲಿದ್ದು, ವಾದಿಯರಿಗೆ ಸದರಿ ಆಸ್ತಿಗಳ ಸ್ವಾಧೀನ ಕೊಡದೇ ಮೋಸ ಮಾಡುತ್ತಿದ್ದಾನೆ. ವಾದಿಯರ ತಂದೆ ತಾಯಿಯ ಜೀವಿತಾವಧಿಯಲ್ಲಿ ಮೃತ ಪ್ರಕಾಶ್ ಮತ್ತು 1 ನೇ ಪ್ರತಿವಾದಿ ಸರ್ವೆ ನಂ.234/ಪಿ ರಲ್ಲಿ 2 ಎಕರೆ, ಸರ್ವೆ ನಂ.221/ಪಿ ರಲ್ಲಿ 2 ಎಕರೆ 20 ಗುಂಟೆ ಜಮೀನನ್ನು ಮಾರಾಟ ಮಾಡಿದ್ದು, ಸದರಿ ಆಸ್ತಿಗಳನ್ನು ಈ ದಾವೆಯಲ್ಲಿ ಸೇರ್ಪಡೆ ಮಾಡಿರುವುದಿಲ್ಲ. 1 ನೇ ಪ್ರತಿವಾದಿಯು ದಾವಾ ಎ ಶೆಡ್ಯೂಲ್ ಆಸ್ತಿಯನ್ನು 4 ನೇ ಪ್ರತಿವಾದಿಗೆ ವಾದಿಯರ ಸಮ್ಮತಿಯನ್ನು ಪಡೆಯದೇ ಮಾರಾಟ ಮಾಡಿದ್ದರಿಂದ ದಾವೆಗೆ ವ್ಯಾಜ್ಯ ಕಾರಣ ಉಂಟಾಗಿರುತ್ತದೆ. ಆದ್ದರಿಂದ ದಾವೆಯಲ್ಲಿ ಕೇಳಿದಂತೆ ಡಿಕ್ರಿ ಮಾಡಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

4. ದಾವೆಯನ್ನು ದಾಖಲಿಸಿಕೊಂಡು ಪ್ರತಿವಾದಿಯರಿಗೆ ನ್ಯಾಯಾಲಯದಿಂದ ಸಮನ್ಸ ಕಳುಹಿಸಲಾಗಿ, 1 ಮತ್ತು 2 ನೇ ಪ್ರತಿವಾದಿಯರು ವಕೀಲರ ಮೂಲಕ ಹಾಜರಾಗಿ ತಮ್ಮ ಪರವಾಗಿ ಪ್ರತಿವಾದಪತ್ರವನ್ನು ಸಲ್ಲಿಸಿದ್ದಾರೆ. 3 ಮತ್ತು 4 ನೇ ಪ್ರತಿವಾದಿಯರು ಏಕತರ್ಫಿ ಉಳಿದಿರುತ್ತಾರೆ.

5. 1 ಮತ್ತು 2 ನೇ ಪ್ರತಿವಾದಿಯರ ಪ್ರತಿವಾದಪತ್ರದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆಃ-

ಪ್ರತಿವಾದಿಯು ಪ್ರತಿವಾದಪತ್ರದಲ್ಲಿ ವಾದಪತ್ರದ ಎಲ್ಲಾ ವಿವರಗಳನ್ನು ಅಲ್ಲಗಳೆದಿರುತ್ತಾರೆ. ವಾದಿಯರು ಕಾಲಪರಿಮಿತಿ ಮೀರಿ ದಾವಾ ಸಲ್ಲಿಸಿರುವುದರಿಂದ ದಾವೆಯು ಊರ್ಜಿತವಾಗುವುದಿಲ್ಲ. 1 ಮತ್ತು 2 ನೇ ಪ್ರತಿವಾದಿಯರು ದಾವಾ ಐಟಂ ನಂ.1 ನ್ನು

ದಿಃ19/12/2014 ರಂದು ನೊಂದಾಯಿತ ಕ್ರಯಪತ್ರದ ಮೂಲಕ ರೂ.3,50,000/-ಗಳಿಗೆ 4 ನೇ ಪ್ರತಿವಾದಿಗೆ ತಮ್ಮ ಕೌಟುಂಬಿಕ ಅಡಚಣೆಗಾಗಿ ಮಾರಾಟ ಮಾಡಿದ್ದಾರೆ. ದಿಃ13/04/1992 ರ ವಿಭಾಗಪತ್ರದಲ್ಲಿ ಕೊಂಡಜ್ಜಿ ಗ್ರಾಮದ ಸರ್ವೆ ನಂ.215/ಪಿ ಯಲ್ಲಿ 31 ಗುಂಟೆ ಜಮೀನು ಬಸಪ್ಪ ಬಿನ್ ಚನ್ನಬಸಪ್ಪ ಎನ್ನುವವರ ಹಿಸ್ಸೆಗೆ ಬಂದಿದ್ದು, ಅವರು ಮೃತಪಟ್ಟ ನಂತರ 1 ನೇ ಪ್ರತಿವಾದಿಗೆ ಬಂದಿರುತ್ತದೆ. ಸರ್ವೆ ನಂ.215/ಪಿ ರಲ್ಲಿ ಉಳಿದ 31 ಗುಂಟೆ ಜಮೀನನ್ನು 1 ನೇ ಪ್ರತಿವಾದಿಯು ಬಸಮ್ಮ ಬಿನ್ ಕರೆಗೌಡಪ್ಪ ಎನ್ನುವವರಿಂದ ರೂ.12,000/-ಗಳಿಗೆ ಮೌಖಿಕ ಕ್ರಯದ ಮೂಲಕ ಖರೀದಿಸಿದ್ದಾರೆ. ಆದ್ದರಿಂದ ದಾವಾ ಎ ಶೆಡ್ಯೂಲನ ಐಟಂ ನಂ.1, 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಾಗಿದ್ದು, 1 ಮತ್ತು 2 ನೇ ಪ್ರತಿವಾದಿಯರು ಸದರಿ ಆಸ್ತಿಯನ್ನು 4 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದು, 4 ನೇ ಪ್ರತಿವಾದಿಯು ಸ್ವಾಧೀನಾನುಭವದಲ್ಲಿದ್ದಾರೆ. ದಾವಾ 'A' ಶೆಡ್ಯೂಲ್ ಆಸ್ತಿಯಲ್ಲಿ ವಾದಿಯರಿಗೆ ಮತ್ತು 1 ರಿಂದ 3 ನೇ ಪ್ರತಿವಾದಿಯರಿಗೆ ಯಾವುದೇ ಹಕ್ಕ, ಹಿತಾಸಕ್ತಿ ಇರುವುದಿಲ್ಲ. ವಾದಿಯರು ಮೂಲ ದಾವಾ ನಂ.25/2006 ಮತ್ತು ರೆವೆನ್ಯೂ ನ್ಯಾಯಾಲಯದ ಪ್ರಕರಣಗಳ ಬಗ್ಗೆ ಮರೆಮಾಚಿ ಸುಳ್ಳು ದಾವಾ ಸಲ್ಲಿಸಿದ್ದಾರೆ. ವಾದಿ, ಪ್ರತಿವಾದಿಯರು ದಾವಾ ಆಸ್ತಿಗಳ ಜಂಟಿ ಸ್ವಾಧೀನಾನುಭವದಲ್ಲಿರುವುದಿಲ್ಲ. ದಾವಾ ಆಸ್ತಿಗಳು ಪಿತ್ರಾರ್ಜಿತವಾಗಿ ಬಂದಿರುವುದಿಲ್ಲ. 1 ನೇ ಪ್ರತಿವಾದಿಯ ಸಹೋದರ ಪ್ರಕಾಶನ ಹಿಸ್ಸೆಗೆ ಬಂದ ಆಸ್ತಿಗಳಲ್ಲಿ ವಾದಿಯರಿಗೆ ಯಾವುದೇ ಹಕ್ಕು, ಹಿತಾಸಕ್ತಿ ಇರುವುದಿಲ್ಲ, 1 ನೇ ಪ್ರತಿವಾದಿ ಮತ್ತು ಅವರ ಸಹೋದರರ ಮಧ್ಯದಲ್ಲಿ ದಿಃ05/08/1991 ರಂದು ಜುಬಾನೆ ಹಿಸ್ಸೆಯಾಗಿದ್ದು, ದಿಃ13/04/1992 ರಲ್ಲಿ ನೊಂದಾಯಿತ ವಿಭಾಗಪತ್ರವಾಗಿರುತ್ತದೆ. 1 ನೇ ಪ್ರತಿವಾದಿಯು ದಾವಾ B, C, F, G ಮತ್ತು E ಶೆಡ್ಯೂಲ್ ಆಸ್ತಿಯ 26 ಗುಂಟೆ ಜಮೀನಿನ ಸಂಪೂರ್ಣ ಮಾಲೀಕನಾಗಿರುತ್ತಾನೆ. ದಾವಾ ಆಸ್ತಿಗಳಲ್ಲಿ ವಾದಿಯರಿಗೆ ಯಾವುದೇ ಭಾಗಾಂಶದ ಹಕ್ಕು ಇರುವುದಿಲ್ಲ. ಆದ್ದರಿಂದ ಪ್ರಸ್ತುತ ದಾವೆಯನ್ನು ಖರ್ಚು ಸಹಿತ ವಜಾಗೊಳಿಸುವಂತೆ ಪ್ರಾರ್ಥಿಸಿಕೊಂಡಿರುತ್ತಾರೆ.

6. ವಿಚಾರಣಾ–ನ್ಯಾಯಾಲಯವು ಈ ಕೆಳಕಂಡಂತೆ ವಿವಾದಾಂಶಗಳನ್ನು ರಚಿಸಿರುತ್ತದೆ.

ವಿವಾದಾಂಶಗಳು

1. Whether the plaintiffs prove that the suit schedule properties are the ancestral properties belonging to the plaintiffs and defendants?

2. Whether the plaintiffs are entitled to the relief of 2/4th share in the suit schedule properties?

3. Whether the plaintiffs are entitled to the relief of declaration that the sale deed dated 19/12/2014 executed by the defendant No.1 and 2 registered as document No.1 in the book No.1 bearing No.Harihara 1-03958/2014-15, CD No.HRRD5 is to binding upon the plaintiffs?

4. Whether the plaintiffs are entitled to the relief of declaration that the registered partition deed dated 13/04/1992 is not binding upon the plaintiffs?

5. Whether the plaintiffs are entitled to the relief of permanent injunction against the defendant No.1 and 2 as prayed for?

6. Whether the defendants proves that the suit is hit by law of res judicata?

7. What order or decree?

Additional issues

1. Whether the defendant No.1 and 2 prove that there was an earlier jubani partition on 05/08/1991 in between Basappa S/o Channabasappa, Gouramma W/o Basappa, Manjula, Pushpa, Channappa, Prakash both are sons of Basappa and in the said partition the properties are given to the shares of the plaintiffs and the said partition was acted upon?

2. Whether the defendant No.1 and 2 prove that there was a registered partition deed on 13/04/1992 in between Basappa S/o Channabasappa, Channappa S/o Basappa, Prakash S/o Basappa in the family of the plaintiffs and the defendants and the ancestral and joint family properties are divided?

3. Whether the suit of the plaintiff is barred by law of limitation?

4. Whether the defendant No.1 and 2 prove that there is no any land as described in the plaint E and F schedule?

7. ವಾದಪತ್ರದಲ್ಲಿ ಹೇಳಿರುವ ಸಂಗತಿಗಳನ್ನು ಸಾಬೀತುಪಡಿಸಲು 1 ನೇ ವಾದಿ ತನ್ನನ್ನು ಪಿ.ಡಬ್ಲ್ಯೂ.1 ಎಂದು ಸಾಕ್ಷಿ ವಿಚಾರಣೆ ಮಾಡಿಸಿಕೊಂಡು 15 ದಾಖಲೆಗಳನ್ನು ಹಾಜರುಪಡಿಸಿ ನಿಶಾನೆ ಪಿ.1 ರಿಂದ 15 ಎಂದು ಗುರ್ತಿಸಿಕೊಂಡಿದ್ದಾರೆ. 2 ನೇ ಪ್ರತಿವಾದಿ ತನ್ನನ್ನು ಡಿ.ಡಬ್ಲ್ಯೂ.1 ಎಂದು ಸಾಕ್ಷಿ ವಿಚಾರಣೆ ಮಾಡಿಸಿಕೊಂಡಿದ್ದಾರೆ. ತನ್ನ ಪರವಾಗಿ ಮಲ್ಲಿಕಾರ್ಜುನಪ್ಪ ಎನ್ನುವವರನ್ನು ಡಿ.ಡಬ್ಲ್ಯೂ.2 ಎಂದು ಸಾಕ್ಷಿ ವಿಚಾರಣೆ ಮಾಡಿಸಿಕೊಂಡಿದ್ದಾರೆ. 41 ದಾಖಲೆಗಳನ್ನು

ಹಾಜರುಪಡಿಸಿ ನಿಶಾನೆ ಡಿ.1 ಮತ್ತು 41 ಎಂದು ಗುರ್ತಿಸಿಕೊಂಡಿರುತ್ತಾರೆ.

8. ವಿಚಾರಣಾ-ನ್ಯಾಯಾಲಯವು ಮೇಲಿನ ವಿವಾದಾಂಶ ನಂ.1 ರಿಂದ 5ಕ್ಕೆ ಸಕಾರಾತ್ಮಕವಾಗಿ, ವಿವಾದಾಂಶ ನಂ.6, ಹೆಚ್ಚುವರಿ ವಿವಾದಾಂಶ ನಂ.1 ರಿಂದ 4ಕ್ಕೆ ನಕಾರಾತ್ಮಕವಾಗಿ ಉತ್ತರಿಸಿ ವಾದಿಯರ ದಾವೆಯನ್ನು ಭಾಗಶಃ ಡಿಕ್ರಿ ಮಾಡಿದ್ದು, ಸದರಿ ತೀರ್ಪು ಮತ್ತು ಡಿಕ್ರಿಯಿಂದ ನೊಂದುಕೊಂಡ 1 ಮತ್ತು 2ನೇ ಪ್ರತಿವಾದಿಯರು ಈ ಮೇಲ್ಮನವಿಯನ್ನು ಸಲ್ಲಿಸಿಕೊಂಡು ಬಂದಿರುತ್ತಾರೆ. ಮೇಲ್ಮನವಿಯಲ್ಲಿ 1 ಮತ್ತು 2ನೇ ಪ್ರತಿವಾದಿಯರು/ಮೇಲ್ಮನವಿದಾರರು ಹೇಳಿಕೊಂಡಿರುವ ಸಂಗತಿಗಳ ಸಾರಾಂಶ ಈ ಕೆಳಗಿನಂತಿದೆ.

(ಎ) ವಿಚಾರಣಾ-ನ್ಯಾಯಾಲಯವು ನೈಸರ್ಗಿಕ ನ್ಯಾಯತತ್ವಗಳಿಗೆ ವಿರುದ್ಧವಾಗಿ ಆದೇಶ ಮಾಡಿರುವುದರಿಂದ ಸದರಿ ತೀರ್ಪು ಮತ್ತು ಡಿಕ್ರಿಯನ್ನು ತಳ್ಳಿ ಹಾಕಲು ಯೋಗ್ಯವಾಗಿರುತ್ತದೆ.

(ಬಿ) ವಿಚಾರಣಾ ನ್ಯಾಯಾಲಯವು ಪ್ರತಿವಾದಿಯರು ಹಾಜರುಪಡಿಸಿದ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯಗಳನ್ನು ಪರಿಶೀಲನೆ ಮಾಡದೇ ದಾವೆಯನ್ನು ಡಿಕ್ರಿ ಮಾಡಿರುವುದು ಸಮಂಜಸವಾಗಿರುವುದಿಲ್ಲ.

(ಸಿ) ವಿಚಾರಣಾ ನ್ಯಾಯಾಲಯವು ಪಿ.ಡಬ್ಲೂ.1 ರವರು ದಿಃ13/04/1992ರ ನೊಂದಾಯಿತ ಪಾಲುವಿಭಾಗಪತ್ರವನ್ನು ಒಪ್ಪಿಕೊಂಡಿದ್ದರೂ ಸಹ ದಾವೆಯನ್ನು ಡಿಕ್ರಿ ಮಾಡಿರುವುದು ಸಮಂಜಸವಾಗಿರುವುದಿಲ್ಲ.

(ಡಿ) ವಿಚಾರಣಾ ನ್ಯಾಯಾಲಯವು ಕುಟುಂಬದ ಮೂಲ ಪುರುಷ ಬಸಪ್ಪ ಮತ್ತು ಗೌರಮ್ಮ ಎನ್ನುವವರಿಗೆ ಇಬ್ಬರು ಗಂಡುಮಕ್ಕಳು, 4 ಜನ ಹೆಣ್ಣುಮಕ್ಕಳಿದ್ದು, ದಿಃ05/08/1991 ರಂದು

ನಿಶಾನೆ ಡಿ1(ಎ)ರಂತೆ ಜುಬಾನೆ ಹಿಸ್ಸೆ ಮಾಡಿಕೊಂಡಿದ್ದು, ನಂತರ ದಿಃ13/04/1992 ರಂದು ನೊಂದಾಯಿತ ವಿಭಾಗಪತ್ರ ಮಾಡಿಕೊಂಡಿದ್ದಾರೆ ಎನ್ನುವ ಸಂಗತಿಗಳನ್ನು ಗಮನಿಸದೇ ದಾವೆಯನ್ನು ಡಿಕ್ರಿ ಮಾಡಿರುವುದು ಸಮಂಜಸವಾಗಿರುವುದಿಲ್ಲ.

(ಇ) ವಿಚಾರಣಾ ನ್ಯಾಯಾಲಯವು ಪ್ರತಿವಾದಿಯರು ಹಾಜರುಪಡಿಸಿದ ನಿಶಾನೆ ಡಿ1 ರಿಂದ 5 ಮೂಲ ದಾವಾ ನಂ25/2006 ರ ದೃಢೀಕೃತ ನಕಲುಗಳನ್ನು ಒಪ್ಪಿಕೊಂಡಿದ್ದರೂ ಸದರಿ ದಾಖಲೆಗಳನ್ನು ಅವಲೋಕಿಸದೇ ದಾವೆಯನ್ನು ಡಿಕ್ರಿ ಮಾಡಿರುವುದು ಸಮಂಜಸವಾಗಿರುವುದಿಲ್ಲ.

(ಎಫ್) ವಿಚಾರಣಾ ನ್ಯಾಯಾಲಯವು ಹೆಚ್ಚುವರಿ ವಿವಾದಾಂಶ ನಂ1 ಮತ್ತು 2 ನ್ನು ಉತ್ತರಿಸುವಾಗ ದಿಃ05/08/1991 ರ ಜುಬಾನಿ ಪಾಲುಪತ್ರ ಮತ್ತು ದಿಃ13/04/1992 ರ ನೊಂದಾಯಿತ ವಿಭಾಗಪತ್ರವನ್ನು ಪರಿಶೀಲನೆ ಮಾಡದೇ ಸದರಿ ವಿಭಾಗಪತ್ರ ವಾದಿಯರ ಹಿಸ್ಸೆಗೆ ಬಂಧನಕಾರಿಯಾಗಿರುವುದಿಲ್ಲ ಎಂದು ಕಾರಣ ನೀಡಿದ್ದು, ವಾದಿಯರು 1992 ರಿಂದ ನಿಗದಿತ ಕಾಲಾವಧಿಯಲ್ಲಿ ದಾವೆಯನ್ನು ಸಲ್ಲಿಸದೇ ಕಾಲಪರಿಮಿತಿ ಮೀರಿ ದಾವಾ ಸಲ್ಲಿಸಿದ್ದಾರೆ ಎನ್ನುವ ಸಂಗತಿಯನ್ನು ಪ್ರತಿವಾದಿಯರು ಸಾಬೀತುಪಡಿಸಿದಾಗಲೂ ಪ್ರಸ್ತುತ ವಿಭಾಗಪತ್ರ ವಾದಿಯರ ಹಿಸ್ಸೆಗೆ ಬಂಧನಕಾರಿಯಾಗಿರುವುದಿಲ್ಲ ಎಂದು ಕಾರಣ ನೀಡಿರುವುದು ಸಮಂಜಸವಾಗಿರುವುದಿಲ್ಲ.

(ಜಿ) ವಿಚಾರಣಾ ನ್ಯಾಯಾಲಯವು ವಾದಿ, ಪ್ರತಿವಾದಿಯರ ಮಧ್ಯದಲ್ಲಿ ಮೂಲ ದಾವಾ ನಂ25/2006 ತೀರ್ಮಾನವಾಗಿರುವುದರಿಂದ ವಾದಿಯರ ದಾವೆಯು ಪೂರ್ವ ನ್ಯಾಯತತ್ವಗಳಿಗೆ ಒಳಪಡುತ್ತದೆ ಎಂದು ಪ್ರತಿವಾದಿಯರು ಸಾಬೀತುಪಡಿಸಿದಾಗಲೂ ವಿವಾದಾಂಶ ನಂ.6 ನ್ನು ನಕಾರಾತ್ಮಕವಾಗಿ ಉತ್ತರಿಸಿರುವುದು ಸಮಂಜಸವಾಗಿರುವುದಿಲ್ಲ.

(ಹೆಚ್) ವಿಚಾರಣಾ ನ್ಯಾಯಾಲಯವು ದಾವಾ 'E' ಮತ್ತು 'F' ಆಸ್ತಿಗಳು ಅಸ್ತಿತ್ವದಲ್ಲಿರುವುದಿಲ್ಲ

ಎಂದು ಪ್ರತಿವಾದಿಯರು ಸಾಬೀತುಪಡಿಸಿದಾಗಲೂ ವಾದಿಯರು ಸದರಿ ಆಸ್ತಿಗಳ ಕುರಿತು ಯಾವುದೇ ದಾಖಲೆಗಳನ್ನು ಹಾಜರುಪಡಿಸದೇ ಇದ್ದರೂ ಸಹ ದಾವೆಯನ್ನು ಡಿಕ್ರಿ ಮಾಡಿರುವುದು ಸಮಂಜಸವಾಗಿರುವುದಿಲ್ಲ.

(ಐ) ವಿಚಾರಣಾ ನ್ಯಾಯಾಲಯವು ಸೂಕ್ತ ಕಾರಣಗಳನ್ನು ಕೊಡದೇ ತಪ್ಪು ನಿರ್ಣಯಕ್ಕೆ ಬಂದು ಕಾನೂನಿನ ತತ್ವಗಳಿಗೆ ವಿರುದ್ಧವಾಗಿ ದಾವೆಯನ್ನು ಡಿಕ್ರಿ ಮಾಡಿರುತ್ತದೆ ಆದ್ದರಿಂದ ಮೂಲ ದಾವೆ ಸಂ.244/2015 ರಲ್ಲಿ ದಿನಾಂಕ 26/10/2021 ರಂದು ವಿಚಾರಣಾ-ನ್ಯಾಯಾಲಯವು ನೀಡಿರುವಂತಹ ತೀರ್ಪು ಮತ್ತು ಡಿಕ್ರಿ ರದ್ದುಪಡಿಸಿ ಈ ಮೇಲ್ಮನವಿಯನ್ನು ಪುರಸ್ಕರಿಸಬೇಕೆಂದು ಮೇಲ್ಮನವಿದಾರರು ಪ್ರಾರ್ಥಿಸಿಕೊಂಡಿರುತ್ತಾರೆ.

9. ಮೇಲ್ಮನವಿಯನ್ನು ದಾಖಲಿಸಿಕೊಂಡು ಎದುರುದಾರರಿಗೆ ನ್ಯಾಯಾಲಯದಿಂದ ನೊಟೀಸನ್ನು ಕಳುಹಿಸಲಾಗಿ, ಎದುರುದಾರರು ವಕೀಲರ ಮೂಲಕ ಹಾಜರಾಗಿದ್ದಾರೆ. ವಿಚಾರಣಾ-ನ್ಯಾಯಾಲಯದಿಂದ ಕಡತವನ್ನು ತರಿಸಿ ಮೇಲ್ಮನವಿದಾರ ಮತ್ತು ಎದುರುದಾರರ ಪರ ವಕೀಲರ ವಾದವನ್ನು ಆಲಿಸಲಾಯಿತು. ಈ ಪ್ರಕರಣವನ್ನು ಅಂತಿಮವಾಗಿ ತೀರ್ಮಾನಕ್ಕೆ ಕೈಗೆತ್ತಿಗೊಂಡಿದೆ.

10. ಈ ಮೇಲ್ಮನವಿಯಲ್ಲಿ ತೀರ್ಮಾನಿಸಬೇಕಾದ ಅಂಶಗಳು ಈ ಕೆಳಗಿನಂತಿವೆ:-

ಅಂಶ-1 - ವಿಚಾರಣಾ ನ್ಯಾಯಾಲಯವು ದಿನಾಂಕ 26/10/2021 ರಂದು ಮೂಲ-ದಾವೆ ಸಂ.244/2015 ರಲ್ಲಿ ನೀಡಿರುವಂತಹ ತೀರ್ಪು ಮತ್ತು ಡಿಕ್ರಿ ಕಾನೂನುಬದ್ಧವಾಗಿಲ್ಲ ಎನ್ನುವುದನ್ನು ಮೇಲ್ಮನವಿದಾರರು ಸಾಭೀತುಪಡಿಸಿದ್ದಾರೆಯೇ?

ಅಂಶ-2 ಮೇಲ್ಮನವಿದಾರರು ದಿಃ13/04/1992 ರಂದು ದಾವಾ

ಆಸ್ತಿಗಳನ್ನು ನೊಂದಾಯಿತ ವಿಭಾಗಪತ್ರದ ಮೂಲಕ ವಿಭಾಗ ಮಾಡಿಕೊಂಡಿದ್ದಾರೆಂದು ಸಾಬೀತುಪಡಿಸಿದಾಗಲೂ ವಿಚಾರಣಾ ನ್ಯಾಯಾಲಯ ಕಾನೂನು ಸಂಗತಿಗಳನ್ನು ತಪ್ಪಾಗಿ ಅರ್ಥೈಸಿಕೊಂಡು ದಾವೆಯನ್ನು ಡಿಕ್ರಿ ಮಾಡಿದ್ದಾರೆಂದು ಸಾಭೀತುಪಡಿಸಿದ್ದಾರೆಯೇ?

ಅಂಶ–3 ಯಾವ ಆದೇಶ?

11. ಮೇಲಿನ ಅಂಶಗಳಿಗೆ ಈ ಕೆಳಕಂಡ ಕಾರಣಗಳಿಗಾಗಿ ಈ ಕೆಳಗಿನಂತೆ ಉತ್ತರಿಸುತ್ತಿದ್ದೇನೆಃ–

ಅಂಶ–1 – ನಕಾರಾತ್ಮಕವಾಗಿ

ಅಂಶ–2 – ನಕಾರಾತ್ಮಕವಾಗಿ

ಅಂಶ–3 – ಅಂತಿಮ ಆದೇಶದಂತೆ.

–: ಕಾರಣಗಳು

12. ಅಂಶ–1 ಮತ್ತು 2 –ಈ ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಮತ್ತು ಇವುಗಳಿಗೆ ನೀಡುವ ಕಾರಣಗಳು ಒಂದೇ ಆಗಿರುವುದರಿಂದ ವಿಷಯದ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಈ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

ವಿಚಾರಣಾ–ನ್ಯಾಯಾಲಯದ ಮೂಲ ದಾವಾ ಸಂ.244/2015ರ ಸಂಪೂರ್ಣ ಕಡತವನ್ನು ಗಮನಿಸಿದ್ದೇನೆ. ವಾದಿ ಸದರಿ ಮೂಲ ದಾವೆಯಲ್ಲಿ ಹಾಜರುಪಡಿಸಿರುವಂತಹ ಎಲ್ಲಾ ಮೌಖಿಕ ಸಾಕ್ಷಿ ಹಾಗೂ ದಾಖಲಾತಿ ಸಾಕ್ಷಿಯನ್ನು ಸಂಪೂರ್ಣವಾಗಿ ಅವಲೋಕಿಸಿದ್ದೇನೆ. ವಾದಿಯರು ವಾದಪತ್ರದಲ್ಲಿ ಹೇಳಿದ ಸಂಗತಿಗಳನ್ನು ಸಾಬೀತುಪಡಿಸಲು 1ನೇ ವಾದಿ ತನ್ನನ್ನು ಪಿ.ಡಬ್ಲೂ.1 ಎಂದು ಸಾಕ್ಷಿ ವಿಚಾರಣೆ ಮಾಡಿಸಿಕೊಂಡು ವಾದಪತ್ರದಲ್ಲಿ ಹೇಳಿದಂತೆ

ಪುನರುಚ್ಚರಿಸಿದ್ದಾರೆ. ವಾದಿ, ಪ್ರತಿವಾದಿಯರ ಕುಟುಂಬದ ಮೂಲ ಪುರುಷ ಬಸಮ್ಮ ಮತ್ತು ಗೌರಮ್ಮ ಎನ್ನುವವರಿಗೆ ಇಬ್ಬರು ಗಂಡುಮಕ್ಕಳು ಮತ್ತು 4 ಜನ ಹೆಣ್ಣುಮಕ್ಕಳು ಇದ್ದು, ಪ್ರಕಾಶ್ ಮತ್ತು ಪುಷ್ಪಾ ಎನ್ನುವವರು ಅವಿವಾಹಿತರಾಗಿ ಮೃತಪಟ್ಟಿದ್ದಾರೆ. ವಾದಿಯರು 1 ಮತ್ತು 3 ನೇ ಪ್ರತಿವಾದಿಯರು ಒಟ್ಟು ಕುಟುಂಬದ ಸದಸ್ಯರಾಗಿದ್ದು, ದಾವಾ ಆಸ್ತಿಗಳು ವಾದಿ, ಪ್ರತಿವಾದಿಯರ ಪಿತ್ರಾರ್ಜಿತ ಮತ್ತು ಅವಿಭಕ್ತ ಕುಟುಂಬದ ಆಸ್ತಿಗಳಾಗಿದ್ದು, ವಾದಿ, ಪ್ರತಿವಾದಿಯರು ಜಂಟಿ ಸ್ವಾಧೀನಾನುಭವದಲ್ಲಿದ್ದಾರೆಂದು ವಾದಿಯರು ನಿಶಾನೆ ಪಿ.1 ರಿಂದ 15 ದಾಖಲೆಗಳನ್ನು ಹಾಜರುಪಡಿಸಿ ಗುರ್ತಿಸಿಕೊಂಡಿರುತ್ತಾರೆ.

13. ಪ್ರತಿವಾದಿಯರು ವಾದಿ ಮತ್ತು ಪ್ರತಿವಾದಿಯರ ಮಧ್ಯದಲ್ಲಿ ಒಟ್ಟು ಕುಟುಂಬ ಅಸ್ತಿತ್ವದಲ್ಲಿರುವುದಿಲ್ಲ. ಕುಟುಂಬದ ಮೂಲ ಪುರುಷ ಬಸಪ್ಪ, 1 ನೇ ಪ್ರತಿವಾದಿ ಮತ್ತು ಮೃತ ಪ್ರಕಾಶ್ ಎನ್ನುವವರು ನಿಶಾನೆ ಪಿ.1 ರಂತೆ ನೊಂದಾಯಿತ ವಿಭಾಗಪತ್ರ ಮಾಡಿಕೊಂಡಿದ್ದಾರೆಂದು ಹೇಳಿದ್ದಾರೆ. ಸದರಿ ವಿಭಾಗಪತ್ರದ ಮೂಲಕ ವಾದಿ, ಪ್ರತಿವಾದಿಯರ ಮಧ್ಯದಲ್ಲಿ ಯಾವುದೇ ಒಟ್ಟು ಕುಟುಂಬ ಅಸ್ತಿತ್ವದಲ್ಲಿರುವುದಿಲ್ಲ. 3 ನೇ ಪ್ರತಿವಾದಿಯು ನಿಶಾನೆ ಡಿ.19 ರಂತೆ ಸರ್ವೆ ನಂ.96/2 ರಲ್ಲಿ 21 ಗುಂಟೆ, ಸರ್ವೆ ನಂ.259/17 ರಲ್ಲಿ 1 ಎಕರೆ 4 ಗುಂಟೆ ಸರ್ವೆ, ನಂ.259/18 ರಲ್ಲಿ 1 ಎಕರೆ 30 ಗುಂಟೆ ಜಮೀನನ್ನು ಹಕ್ಕು ಬಿಡುಗಡೆ ಪತ್ರವನ್ನು ಬರೆದುಕೊಟ್ಟಿದ್ದಾರೆ. ಆದ್ದರಿಂದ ದಾವಾ ಆಸ್ತಿಗಳು ಕುಟುಂಬದ ಮೂಲ ಪುರುಷ ಬಸಪ್ಪ ಮತ್ತು ಪ್ರಕಾಶ್ ಮೃತಪಟ್ಟ ನಂತರ ಅವರ ಹಿಸ್ಸೆಗೆ ಬಂದ ಆಸ್ತಿಗಳು 1 ನೇ ಪ್ರತಿವಾದಿಗೆ ಬಂದಿರುವುದರಿಂದ ದಾವಾ ಆಸ್ತಿಗಳು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳಾಗಿರುತ್ತವೆಂದು ಹೇಳಿದ್ದಾರೆ.

14. ಮೇಲ್ಮನವಿದಾರರ ಪರ ವಕೀಲರು 1 ನೇ ಪ್ರತಿವಾದಿ ಮತ್ತು ಆತನ ಸಹೋದರರು ದಿಃ05/08/1991 ರಲ್ಲಿ ನಿಶಾನೆ ಡಿ.1 ರಂತೆ ಹಾಗೂ ದಿಃ13/04/1992 ರಂದು

ನೊಂದಾಯಿತ ವಿಭಾಗಪತ್ರದ ಮೂಲಕ ವಿಭಾಗಪತ್ರ ಮಾಡಿಕೊಂಡಿರುವುದರಿಂದ ವಾದಿಯರು ಸಲ್ಲಿಸಿದ ದಾವೆಯು ಹಿಂದೂ ಉತ್ತರಾಧಿಕಾರ ಅಧಿನಿಯಮದ ಕಲಂ 6(ಎ)ರಡಿ ಪ್ರತಿಬಂಧ ಇರುವುದರಿಂದ ದಾವೆಯು ಊರ್ಜಿತವಾಗುವುದಿಲ್ಲ ಎಂದು ಮಾನ್ಯ ಘನ ಉಚ್ಚ ನ್ಯಾಯಾಲಯದ ತೀರ್ಪನ್ನು ಹಾಜರುಪಡಿಸಿದ್ದಾರೆ ಅದು ಈ ಕೆಳಗಿನಂತಿದೆ ಃ-

ILR 2021 KAR 613

Sri H.P.Chikkaramma Reddy and another Vs. Smt.Kanthamma and others.-HINDU SUCCESSION (KARNATAKA AMENDMENT) ACT, 1990 (Karnataka Act No.23 of 1994 w.e.f.30/07/1994) Section 6A-Equal rights to daughter in co-parcenary property-Partition took place by virtue of two partition deeds dated 06/02/2003-State took place on 22/11/2004-By virtue of Section 6(5) of the Hindu Succession (Amendment) Act, 2005, maintainability of suit filed by a daughter seeking rights in the co-parcenary property.

15. ಪ್ರತಿವಾದಿಯರು ನೊಂದಾಯಿತ ವಿಭಾಗಪತ್ರವಾಗುವುದಕ್ಕಿಂತ ಮೊದಲು ದಿಃ05/08/1991ರಲ್ಲಿ ಕುಟುಂಬದ ಮೂಲ ಪುರುಷ ಬಸಪ್ಪ ಮತ್ತು ಆತನ ಮಕ್ಕಳಾದ 1 ನೇ ಪ್ರತಿವಾದಿ ಮತ್ತು ಪ್ರಕಾಶ್ ಎನ್ನುವವರ ಮಧ್ಯದಲ್ಲಿ ನಿಶಾನೆ ಡಿ.1ರಂತೆ ಜುಬಾನಿ ಹಿಸ್ಸೆಯಾಗಿದ್ದು, ನಂತರ ನಿಶಾನೆ ಪಿ.1/ನಿಶಾನೆ ಡಿ.12ರಂತೆ ನೊಂದಾಯಿತ ವಿಭಾಗಪತ್ರವಾಗಿದೆ ಎಂದು ಹೇಳಿದ್ದಾರೆ. ವಾದಿ ಪರ ವಕೀಲರು ಡಿ.ಡಬ್ಲೂ.1 ಮತ್ತು 2ರವರನ್ನು ಪಾಟೀ ಸವಾಲಿಗೆ ಒಳಪಡಿಸಲಾಗಿ, ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದು ಒಪ್ಪಿಕೊಂಡಿದ್ದಾರೆ. ನಿಶಾನೆ ಪಿ.1 ಮತ್ತು ನಿಶಾನೆ ಡಿ.12 ರಲ್ಲಿಯೂ ಸಹ ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದು

ನಮೂದಾಗಿರುತ್ತವೆ. 1 ನೇ ಪ್ರತಿವಾದಿಯ ದಾವಾ ಆಸ್ತಿಗಳನ್ನು ಸ್ವಯಾರ್ಜಿತವಾಗಿ ಖರೀದಿಸಿದ್ದೇನೆಂದು ಹೇಳಿರುವುದಿಲ್ಲ. ಆದರೆ ತನ್ನ ಸಹೋದರ ಪ್ರಕಾಶ್ ಮತ್ತು ತಮ್ಮ ತಂದೆ ಮೃತಪಟ್ಟಿದ್ದರಿಂದ ಅವರ ಹಿಸ್ಸಾ ಆಸ್ತಿಗಳು ತನಗೆ ಪ್ರಾಪ್ತವಾಗಿವೆ ಎಂದು ಹೇಳಿದ್ದಾರೆ. ಅದೇ ರೀತಿ ನಿಶಾನೆ ಡಿ.19 ರಂತೆ 3 ನೇ ಪ್ರತಿವಾದಿಯಿಂದ ಹಕ್ಕು ಬಿಡುಗಡೆ ಪತ್ರದ ಮೂಲಕ 1 ನೇ ಪ್ರತಿವಾದಿಗೆ ಆಸ್ತಿಗಳು ಪ್ರಾಪ್ತವಾಗಿವೆ ಎಂದು ಹೇಳಿದ್ದಾರೆ. ನಿಶಾನೆ ಪಿ.1 ಹಾಗೂ ಡಿ.ಡಬ್ಲೂ.1 ಮತ್ತು 2 ರವರ ಸಾಕ್ಷ್ಯಗಳನ್ನು ಪರಿಶೀಲಿಸಲಾಗಿ, ದಾವಾ ಆಸ್ತಿಗಳು ವಾದಿ, ಪ್ರತಿವಾದಿಯರ ಪಿತ್ರಾರ್ಜಿತ ಮತ್ತು ಒಟ್ಟು ಕುಟುಂಬದ ಆಸ್ತಿಗಳು ಎಂದು ಸ್ಪಷ್ಟವಾಗಿ ಕಂಡುಬರುತ್ತದೆ.

16. 1 ಮತ್ತು 2 ನೇ ಪ್ರತಿವಾದಿಯರು ದಾವಾ ಎ ಶೆಡ್ಯೂಲ್ ಆಸ್ತಿಯನ್ನು 4 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದು, ದಾವಾ ಎ ಶೆಡ್ಯೂಲ್ ಆಸ್ತಿಯು 4 ನೇ ಪ್ರತಿವಾದಿಯ ಮಾಲೀಕತ್ವ ಮತ್ತು ಸ್ವಾಧೀನಾನುಭವದಲ್ಲಿವೆ ಎಂದು ಹೇಳಿದ್ದಾರೆ. ಅದೇ ರೀತಿ ಮೃತ ಪ್ರಕಾಶ್ ಎನ್ನುವವರು ದಾವಾ 'F' ಆಸ್ತಿಯ ಪೈಕಿ 26 ಗುಂಟೆ ಜಮೀನನ್ನು ಭೀಮಪ್ಪ ಎನ್ನುವವರಿಗೆ ಮಾರಾಟ ಮಾಡಿದ್ದಾರೆ ಆ ಕುರಿತು ಪ್ರತಿವಾದಿಯರು ನಿಶಾನೆ ಡಿ.23 ಮ್ಯುಟೇಶನ್ ಪ್ರತಿಯನ್ನು ಪರಿಶೀಲಿಸಲಾಗಿ ಕಂಡುಬರುತ್ತದೆ. ಆದ್ದರಿಂದ ಸದರಿ ಆಸ್ತಿಗಳು ಅಸ್ತಿತ್ವದಲ್ಲಿರುವುದಿಲ್ಲ ಎಂದು ಹೇಳಿದ್ದಾರೆ. ಪ್ರತಿವಾದಿಯರು ಆಧರಿಸುವಂತೆ ದಿಃ13/04/1992 ರಂದು ನೊಂದಾಯಿತ ವಿಭಾಗಪತ್ರವಾಗುವಾಗ ಕುಟುಂಬದ ಮೂಲ ಪುರುಷ ಮೃತನಾಗಿದ್ದು, ಆ ಕುರಿತು ವಾದಿಯರು ನಿಶಾನೆ ಪಿ.15 ಬಸಪ್ಪನ ಮರಣ ಪ್ರಮಾಣಪತ್ರವನ್ನು ಹಾಜರುಪಡಿಸಿದ್ದಾರೆ. ಆದರೆ ನಿಶಾನೆ ಪಿ.1 ರಲ್ಲಿ ಬಸಪ್ಪನ ಹಿಸ್ಸೆಗೆ ದಾವಾ ಸರ್ವೆ ನಂ.215/P ಯಲ್ಲಿ 31 ಗುಂಟೆ 221/P ಯಲ್ಲಿ 1 ಎಕರೆ 29 ಗುಂಟೆ ಜಮೀನುಗಳು ಹಂಚಿಕೆಯಾದ ಬಗ್ಗೆ ಕಂಡುಬರುತ್ತದೆ. ಆದರೆ ನಿಶಾನೆ ಪಿ.1 ವಿಭಾಗಪತ್ರವಾಗುವಾಗ ಬಸಪ್ಪ ಎನ್ನುವವರು ಮೃತರಾಗಿದ್ದು, ಸದರಿ ದಾಖಲೆಗೆ ವಾದಿಯರು ಮತ್ತು 3 ನೇ ಪ್ರತಿವಾದಿ ಪಕ್ಷಗಾರರಾಗಿರುವುದಿಲ್ಲ. ಆದ್ದರಿಂದ ಪ್ರತಿವಾದಿಯರು ಆಧರಿಸುವಂತೆ

ದಿಃ13/04/1992ರ ವಿಭಾಗಪತ್ರ ಮತ್ತು ದಿಃ05/08/1991ರ ಜುಬಾನಿ ಹಿಸ್ಸಾ ಪತ್ರವು ವಾದಿಯರ ಹಿಸ್ಸೆಗೆ ಬಂಧನಕಾರಿಯಾಗಿರುವುದಿಲ್ಲ.

17. 1 ಮತ್ತು 2ನೇ ಪ್ರತಿವಾದಿಯರು 3ನೇ ಪ್ರತಿವಾದಿ ನಿಶಾನೆ ಡಿ.9ರಂತೆ ದಿಃ20/06/2019ರಂದು ಸರ್ವೆ ನಂ.96/2 ರಲ್ಲಿ 21 ಗುಂಟೆ, ಸರ್ವೆ ನಂ.259/17ರಲ್ಲಿ 1 ಎಕರೆ 4 ಗುಂಟೆ 259/18ರಲ್ಲಿ 1 ಎಕರೆ 30 ಗುಂಟೆ ಜಮೀನುಗಳನ್ನು ಹಕ್ಕು ಬಿಡುಗಡೆ ಪತ್ರದ ಮೂಲಕ ಹಸ್ತಾಂತರಿಸಿದ್ದಾರೆಂದು ಆಧರಿಸುತ್ತಿದ್ದಾರೆ ಆದರೆ ನಿಶಾನೆ ಡಿ.9ನ್ನು ಪರಿಶೀಲಿಸಲಾಗಿ, ಮೇಲೆ ಹೇಳಿದ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಎಂದು ನಮೂದಿಸಿದ್ದಾರೆ. 3ನೇ ಪ್ರತಿವಾದಿಗೆ ಸದರಿ ಆಸ್ತಿಗಳನ್ನು 1ನೇ ಪ್ರತಿವಾದಿಗೆ ಹಕ್ಕು ಬಿಡುಗಡೆ ಪತ್ರದ ಮೂಲಕ ವಾದಿಯರ ಮತ್ತು ಉಳಿದ ಕುಟುಂಬದ ಸದಸ್ಯರ ಒಪ್ಪಿಗೆ ಇಲ್ಲದೇ ನಿಶಾನೆ ಪಿ.9ನ್ನು ಬರೆದುಕೊಡಲು ಹಕ್ಕು ಮತ್ತು ಅಧಿಕಾರ ಇರುವುದಿಲ್ಲ.

18. ಪ್ರತಿವಾದಿಯರು ದಿಃ13/04/1992 ರಲ್ಲಿಯೇ ನೊಂದಾಯಿತ ವಿಭಾಗಪತ್ರದ ಮೂಲಕ ವಿಭಾಗ ಮಾಡಿಕೊಂಡಿರುವುದರಿಂದ ವಾದಿಯರ ದಾವೆಯು ಕಾಲಪರಿಮಿತಿ ಮೀರಿ ಸಲ್ಲಿಸಿದ್ದಾರೆಂದು ಆಧರಿಸುತ್ತಿದ್ದು, ದಿಃ13/04/1992 ರಂದು ಕುಟುಂಬದ ಮೂಲ ಪುರುಷ ಬಸಪ್ಪನವರು ಮೃತರಾಗಿದ್ದು, ಅವರ ಹಿಸ್ಸೆಗೆ ಆಸ್ತಿಗಳನ್ನು ಹಂಚಿಕೆ ಮಾಡಿರುವುದರಿಂದ ಸದರಿ ವಿಭಾಗಪತ್ರವು ಕಾನೂನುಬದ್ಧವಾಗಿರುವುದಿಲ್ಲ. ಸದರಿ ವಿಭಾಗಪತ್ರವಾಗುವುದಕ್ಕಿಂತ ಮೊದಲೇ ಕುಟುಂಬದ ಮೂಲ ಪುರುಷ ದಿಃ15/11/1991 ರಂದು ಮೃತಪಟ್ಟಿದ್ದಾರೆಂದು ವಾದಿಯರು ನಿಶಾನೆ ಪಿ.15 ಮರಣ ಪ್ರಮಾಣಪತ್ರವನ್ನು ಹಾಜರುಪಡಿಸಿದ್ದಾರೆ. ಅದೇ ರೀತಿ ಪ್ರತಿವಾದಿಯರು ಸಹ ಮರಣಪ್ರಮಾಣಪತ್ರವನ್ನು ಹಾಜರುಪಡಿಸಿ ನಿಶಾನೆ ಡಿ.35 ಎಂದು ಗುರ್ತಿಸಿಕೊಂಡಿರುತ್ತಾರೆ. ಆದ್ದರಿಂದ ಪ್ರತಿವಾದಿಯರು ಆಧರಿಸುವಂತೆ ಕುಟುಂಬದ ಮೂಲ ಪುರುಷ ಬಸಪ್ಪ ಮೃತಪಟ್ಟ

ನಂತರ ಆತನನ್ನು ಸೇರಿಸಿ ದಿಃ13/04/1992 ರಂದು ನೊಂದಾಯಿತ ಪಾಲುವಿಭಾಗಪತ್ರ ಮಾಡಿಕೊಂಡಿರುವುದು ವಾದಿಯರ ಹಿಸ್ಸೆಗೆ ಬಂಧನಕಾರಿಯಾಗಿರುವುದಿಲ್ಲ.

19. ಪ್ರತಿವಾದಿಯರು ಕುಟುಂಬದ ಮೂಲ ಪುರುಷ ಬಸಮ್ಮ ಮತ್ತು ಆತನ ಹೆಂಡತಿ ಗೌರಮ್ಮ ಮತ್ತು ಅವರ ಮಕ್ಕಳಾದ 1 ನೇ ವಾದಿ, 1 ನೇ ಪ್ರತಿವಾದಿ, ಮೃತ ಪುಷ್ಪಾ ಮತ್ತು ಪ್ರಕಾಶ್ ಎನ್ನುವವರು ನಿಶಾನೆ ಡಿ.1(ಎ)ರಂತೆ ಜುಬಾನೆ ಹಿಸ್ಸೆ ಮಾಡಿಕೊಂಡಿದ್ದು, ಆ ಮೇರೆಗೆ ಮೃತ ಪ್ರಕಾಶ್ ಎನ್ನುವವರು ದಾವಾ ಐಟಂ ನಂ.F, ಸರ್ವೆ ನಂ.259/1 ರಲ್ಲಿ 1 ಎಕರೆ 23 ಗುಂಟೆ ಜಮೀನಿನ ಪೈಕಿ 26 ಗುಂಟೆ ಜಮೀನನ್ನು ದಿಃ20/02/1999 ರಂದು ನಿಶಾನೆ ಡಿ.38 ಕ್ರಯಪತ್ರದ ಮೇರೆಗೆ ಎ.ಭೀಮಪ್ಪ ಬಿನ್ ಬಸಪ್ಪ ಎನ್ನುವವರಿಗೆ 26 ಗುಂಟೆ ಜಮೀನನ್ನು ಮಾರಾಟ ಮಾಡಿದ್ದಾರೆ. ಸದರಿ ನಿಶಾನೆ ಡಿ.1(ಎ) ಜುಬಾನಿ ಹಿಸ್ಸೆ ಕಾರ್ಯರೂಪಕ್ಕೆ ಬಂದಿರುವುದರಿಂದ ವಾದಿಯರಿಗೆ ದಾವೆಯನ್ನು ಸಲ್ಲಿಸಲು ಯಾವುದೇ ವ್ಯಾಜ್ಯ ಕಾರಣ ಇರುವುದಿಲ್ಲ ಮತ್ತು ವಿಭಾಗಪತ್ರದ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಈ ದಾವೆ ಸಲ್ಲಿಸುವುದಕ್ಕಿಂತ ಮೊದಲು ಪ್ರತಿವಾದಿಯರ ವಿರುದ್ಧ ಮೂಲ ದಾವಾ ನಂ.25/2006 ನ್ನು ಸಲ್ಲಿಸಿದ್ದು, ಸದರಿ ದಾವೆ ವಜಾ ಆಗಿರುತ್ತವೆ ಎಂದು ಸದರಿ ದಾವೆಯ ವಾದಪತ್ರ  ಪರಿಶೀಲನಾ ಪ್ರಮಾಣಪತ್ರ ತೀರ್ಪು ಮತ್ತು ಡಿಕ್ರಿಯನ್ನು ವಾದಿಯ ಮುಖ್ಯ ವಿಚಾರಣೆಯ ದೃಢೀಕೃತ ನಕಲುಗಳನ್ನು ಹಾಜರುಪಡಿಸಿ ನಿಶಾನೆ ಡಿ.1 ರಿಂದ 5 ಎಂದು ಗುರ್ತಿಸಿಕೊಂಡಿರುತ್ತಾರೆ. ವಾದಿಯರು ಮೃತ ಪ್ರಕಾಶ್ ಎನ್ನುವವರು ತನ್ನ ಹಿಸ್ಸೆಗೆ ಬಂದ ಆಸ್ತಿಗಳನ್ನು ಮರಣಶಾಸನದ ಮೂಲಕ ಸರ್ವೆ ನಂ.96/2 ರಲ್ಲಿ 23 ಗುಂಟೆ 2 ಗುಂಟೆ ಖರಾಬು, 96/3 ರಲ್ಲಿ 24 ಗುಂಟೆ ಕೊಟ್ಟಿದ್ದು, ಸದರಿ ಆಸ್ತಿಗಳನ್ನು ಸಾಗುವಳಿ ಮಾಡಲು 1 ನೇ ಪ್ರತಿವಾದಿ ತೊಂದರೆ ಮಾಡುತ್ತಿದ್ದಾನೆಂದು ಶಾಶ್ವತ ನಿರ್ಬಂಧಕಾಜ್ಞೆಯನ್ನು ಕೋರಿ ದಾವಾ ಸಲ್ಲಿಸಿದ್ದು, ಸದರಿ ದಾವೆ ವಜಾ ಆಗಿರುತ್ತದೆ. ವಾದಿಯರು ಸದರಿ ಮರಣಶಾಸನದ ಮೇರೆಗೆ ಯಾವುದೇ ಘೋಷಣಾತ್ಮಕ ಪರಿಹಾರವನ್ನು ಕೇಳಿರುವುದಿಲ್ಲ. ವಾದಿ, ಪ್ರತಿವಾದಿಯರು

ಕುಟುಂಬದ ಮೂಲ ಪುರುಷ ಬಸಪ್ಪ ಮತ್ತು ಗೌರಮ್ಮನ ಮಕ್ಕಳು ಎನ್ನುವ ಬಗ್ಗೆ ಯಾವುದೇ ವಿವಾದ ಇರುವುದಿಲ್ಲ. ಪ್ರತಿವಾದಿಯರು ಆಧರಿಸುವಂತೆ ವಾದಿಯರು ನಿಶಾನೆ ಪಿ.1 ನೊಂದಾಯಿತ ವಿಭಾಗಪತ್ರಕ್ಕೆ ಮತ್ತು ನಿಶಾನೆ ಡಿ.1 ಜುಬಾನಿ ಹಿಸ್ಸೆಗೆ ಪಕ್ಷಗಾರರಾಗಿರುವುದಿಲ್ಲ. ನಿಶಾನೆ ಪಿ.1 ನೊಂದಾಯಿತ ಪಾಲುವಿಭಾಗವಾಗುವ ಕಾಲಕ್ಕೆ ವಾದಿಯರ ತಂದೆ ಬಸಪ್ಪ ಮೃತರಾಗಿದ್ದು, ಅವರನ್ನು ಪಕ್ಷಗಾರರನ್ನಾಗಿ ಸೇರ್ಪಡೆ ಮಾಡಿ ಪಾಲುವಿಭಾಗ ಮಾಡಿಕೊಂಡಿರುವುದು ಕಾನೂನುಬದ್ಧವಾಗಿರುವುದಿಲ್ಲ. ವಾದಿಯರ ತಂದೆ ಬಸಪ್ಪ ದಿಃ15/11/1991 ನಿಶಾನೆ ಪಿ.1 ಪಾಲುವಿಭಾಗವಾಗುವುದಕ್ಕಿಂತ ಮೊದಲೇ ಮೃತಪಟ್ಟಿದ್ದಾರೆಂದು ಪ್ರತಿವಾದಿಯರ ಸಹ ಒಪ್ಪಿಕೊಂಡಿದ್ದಾರೆ ಮತ್ತು ಮರಣ ಪ್ರಮಾಣಪತ್ರವನ್ನು ಹಾಜರುಪಡಿಸಿ ನಿಶಾನೆ ಡಿ.35 ಎಂದು ಗುರ್ತಿಸಿಕೊಂಡಿರುತ್ತಾರೆ.

20. ಮೃತ ಪ್ರಕಾಶ್ ಎನ್ನುವವರು ದಾವಾ 'F' ಶೆಡ್ಯೂಲ್ ಆಸ್ತಿಯಲ್ಲಿ ದಿಃ20/02/1999 ರಂದು 26 ಗುಂಟೆ ಜಮೀನನ್ನು ನಿಶಾನೆ ಡಿ.38 ರಂತೆ ನೊಂದಾಯಿತ ಕ್ರಯಪತ್ರದ ಮೂಲಕ ಭೀಮಪ್ಪ ಎನ್ನುವವರಿಗೆ ಮಾರಾಟ ಮಾಡಿದ್ದಾರೆ. ಸದರಿ ಕ್ರಯಪತ್ರವು ಹಿಂದೂ ಉತ್ತರಾಧಿಕಾರದ ಕಲಂ 6 ರ ತಿದ್ದುಪಡಿಗಿಂತ ಮೊದಲೇ ಆಗಿರುವುದರಿಂದ ಸದರಿ ಕ್ರಯಪತ್ರವು ವಾದಿ, ಪ್ರತಿವಾದಿಯರಿಗೆ ಬಂಧನಕಾರಿಯಾಗುತ್ತದೆ. ವಾದಿಯರಾಗಲೀ, 1 ರಿಂದ 3 ನೇ ಪ್ರತಿವಾದಿಯರಾಗಲೀ ಸದರಿ ಕ್ರಯಪತ್ರವನ್ನು ಪ್ರಶ್ನಿಸಿರುವುದಿಲ್ಲ ಮತ್ತು ಸದರಿ ಆಸ್ತಿಯ ಕುರಿತು ಯಾವುದೇ ಕ್ಲೇಮು ಮಾಡಿರುವುದಿಲ್ಲ. ಆದ್ದರಿಂದ ನಿಶಾನೆ ಡಿ.38 ಕ್ರಯಪತ್ರವು ವಾದಿಯರು ಮತ್ತು 1 ರಿಂದ 3 ನೇ ಪ್ರತಿವಾದಿಯರಿಗೆ ಬಂಧನಕಾರಿಯಾಗಿರುತ್ತದೆ. 1 ಮತ್ತು 2 ನೇ ಪ್ರತಿವಾದಿಯರು ದಾವಾ 'A' ಶೆಡ್ಯೂಲ್ ಆಸ್ತಿಯನ್ನು 4 ನೇ ಪ್ರತಿವಾದಿಗೆ ನೊಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಿದ್ದಾರೆ. ಸದರಿ ಕ್ರಯಪತ್ರಕ್ಕೆ ವಾದಿಯರು ಪಕ್ಷಗಾರರಾಗಿರುವುದಿಲ್ಲ. ಆದ್ದರಿಂದ 1 ಮತ್ತು 2 ನೇ ಪ್ರತಿವಾದಿಯರು 4 ನೇ ಪ್ರತಿವಾದಿಗೆ

ಮಾರಾಟ ಮಾಡಿದ ಕ್ರಯಪತ್ರ ವಾದಿಯರ ಹಿಸ್ಸೆಗೆ ಬಂಧನಕಾರಿಯಾಗಿರುವುದಿಲ್ಲ.

21. 1 ನೇ ಪ್ರತಿವಾದಿ ಮತ್ತು ಆತನ ಸಹೋದರರು ದಿಃ13/04/1992 ರಂದು ತಮ್ಮ ತಂದೆ ಮೃತಪಟ್ಟಿದ್ದರೂ ಅವರನ್ನು ಪಕ್ಷಗಾರರನ್ನಾಗಿ ಸೇರ್ಪಡೆ ಮಾಡಿ ನೊಂದಾಯಿತ ವಿಭಾಗಪತ್ರ ಮಾಡಿಕೊಂಡಿದ್ದಾರೆ. 1 ನೇ ಪ್ರತಿವಾದಿಯು ತಮ್ಮ ತಂದೆ ಹಿಸ್ಸೆ ಮತ್ತು ತನ್ನ ಮೃತ ಸಹೋದರ ಪ್ರಕಾಶನ ಹಿಸ್ಸೆ ತನ್ನ ತಾಯಿಯ ಹಿಸ್ಸೆ ಒಟ್ಟು ಕುಟುಂಬದ ಬಹು ಪಾಲು ಆಸ್ತಿಗಳು 1 ನೇ ಪ್ರತಿವಾದಿಯ ಸ್ವಾಧೀನಾನುಭವದಲ್ಲಿದ್ದು, ದಿಃ13/04/1992 ರಂದು 1 ನೇ ಪ್ರತಿವಾದಿ ಮತ್ತು ಆತನ ಸಹೋದರರು ಮಾಡಿಕೊಂಡ ಪಾಲುವಿಭಾಗಪತ್ರಕ್ಕೆ ವಾದಿಯರು ಪಕ್ಷಗಾರರಾಗಿರುವುದಿಲ್ಲ. ಆದ್ದರಿಂದ ಸದರಿ ವಿಭಾಗಪತ್ರವು ವಾದಿಯರ ಹಿಸ್ಸೆಗೆ ಬಂಧನಕಾರಿಯಾಗುವುದಿಲ್ಲ. ವಿಚಾರಣಾ ನ್ಯಾಯಾಲಯವು ಮಾನ್ಯ ಘನ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಪ್ರಸ್ತಾಪಿಸಿದ್ದು, Vineeta Sharma Vs. Rakesh Sharma ಪ್ರಕರಣದ ತತ್ವಗಳು ಈ ಪ್ರಕರಣಕ್ಕೆ ಅನ್ವಯವಾಗುವುದರಿಂದ ಮೇಲ್ಮನವಿದಾರರ ಪರ ವಕೀಲರು ಹಾಜರುಪಡಿಸಿದ ತೀರ್ಪಿನ ತತ್ವಗಳು ಮತ್ತು ಈ ದಾವೆಯ ಸಂಗತಿಗಳು ಬೇರೆ ಬೇರೆಯಾಗಿರುವುದರಿಂದ ಈ ಪ್ರಕರಣಕ್ಕೆ ಅನ್ವಯವಾಗುವುದಿಲ್ಲ. ಆದ್ದರಿಂದ ಅಂಶ ನಂ.1 ಮತ್ತು 2 ನ್ನು ನಕಾರಾತ್ಮಕವಾಗಿ ಉತ್ತರಿಸಿದ್ದೇನೆ.

22. ಅಂಶ-3 – ಮೇಲಿನ ಅಂಶದಲ್ಲಿ ಚರ್ಚಿಸಲಾದ ಕಾರಣಗಳಿಗೆ ಈ ಕೆಳಕಂಡಂತೆ ಮಾಡಿದಃ

## ಆದೇಶ

ಮೇಲ್ಮನವಿದಾರರು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 41 ನಿಯಮ 1 ರ ಅಡಿಯಲ್ಲಿ ಸಲ್ಲಿಸಿದಂತಹ ಮೇಲ್ಮನವಿಯನ್ನು ಖರ್ಚು ಸಹಿತ ವಜಾಗೊಳಿಸಲಾಗಿದೆ.

ಮೂಲ ದಾವೆ ಸಂ.244/2015 ರಲ್ಲಿ ದಿನಾಂಕ 26/10/2021 ರಂದು ಹರಿಹರದ 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ನೀಡಿರುವಂತಹ

ತೀರ್ಪು ಮತ್ತು ಡಿಕ್ರಿ ಸಮಂಜಸವಾಗಿದೆ ಎಂದು ಎತ್ತಿ ಹಿಡಿಯಲಾಗಿದೆ.

ವಿಚಾರಣಾ ನ್ಯಾಯಾಲಯದ ಕಡತದ ಜೊತೆ ಈ ತೀರ್ಪಿನ ನಕಲನ್ನು ವಿಚಾರಣಾ ನ್ಯಾಯಾಲಯಕ್ಕೆ ಕಳುಹಿಸಿಕೊಡತಕ್ಕದ್ದು.

ಮೇಲ್ಕಂಡಂತೆ ಡಿಕ್ರಿ ಬರೆಯತಕ್ಕದ್ದು.

(ನನ್ನ ಉಕ್ತಲೇಖನದ ಪ್ರಕಾರ ಶೀಘ್ರಲಿಪಿಗಾರರಿಂದ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ಅದರಲ್ಲಿದ್ದ ಲೋಪದೋಷಗಳನ್ನು ತಿದ್ದಿ ಇಂದು ದಿನಾಂಕ 06 ನೇ ಫೆಬ್ರವರಿ 2024 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

SHARADADEVI C HATTI
Digitally signed by SHARADADEVI C HATTI
Date: 2024.02.06 17:02:23 +0530

(ಶಾರದಾದೇವಿ ಸಿ.ಹಟ್ಟಿ),
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹರಿಹರ.